**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು, ಜೆ.ಎಂ.ಎಫ್.ಸಿ./ಎಂ.ಎ.ಸಿ.ಟಿ. ಇವರ ನ್ಯಾಯಾಲಯ, ಮುಧೋಳ**
**ಇಂದು ದಿನಾಂಕ 24.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರ ಪರ ವಕೀಲರಾದ ಶ್ರೀ ಎಂ ಕೆ ಎನ್ ರವರಿಂದಃ**

1. ಸಾಯಿ ಆದಾರ್ ಆಸ್ಪತ್ರೆಯ discharge summary ಯನ್ನು ನಿಪಿ 12 ಎಂದು ಗುರುತಿಸಲಾಯಿತು.

2. 10 ವೈದ್ಯಕೀಯ ಬಿಲ್ ಗಳನ್ನು ಒಟ್ಟಾಗಿ ನಿಪಿ 13 ಎಂದು ಗುರುತಿಸಲಾಯಿತು.

3. ಎಂ ಎಲ್ ಸಿ ಯ ದೃಢೀಕೃತ ನಕಲನ್ನು ನಿಪಿ 14 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ 2 ರವರ ಪರ ವಕೀಲರಾದ ಶ್ರೀ ಎ ಸಿ ಎನ್ ರವರ ಪರವಾಗಿಃ**

ಅರ್ಜಿದಾರ ಮಾಹಾಲಿಂಗ ತಂದೆ ಭೀಮಸಿ ಬಂಡಿವೊಡ್ಡರ ಈತ ನನಗೆ ಅಣ್ಣನ ಮಗನಾಗಬೇಕು. ಈತ ಜನ್ಮದಿಂದಲು ಮೂಕನಾಗಿದ್ದು ಮಾತನಾಡುತ್ತಿರಲಿಲ್ಲ ಎಂದರೆ ಸರಿ. ಆತನ ಭಾಷೆ ನನಗೆ ಅರ್ಥವಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಅಪಘಾತ ಹಗಲಿನಲ್ಲಿ ಆಗಿರುವುದು. ಮದ್ಯಾಹ್ನದ ಸಮಯದಲ್ಲಿ ನಾವು ಊಟಕ್ಕೆ ಹೋಗುವ ಸಮಯದಲ್ಲಿ ನಮ್ಮ ಹಿಂದಗಡೆಯಿಂದ ಆತ ಬರುತ್ತಿದ್ದರು ಆಗ ಈ ಅಪಘಾತ ಆಗಿರುವುದು. ಈ ಅಪಘಾತ ಆದಾಗ ನಾನು ಮತ್ತು ಮಾಹಾಲಿಂಗ ಒಂದೇ ಕಡೆ ಇರಲಿಲ್ಲ. ಮಾಹಾಲಿಂಗ ನಿಗೆ ಕಿವಿ ಕೇಳಿಸುತ್ತಿರಲ್ಲ ಎಂದರೆ ಸರಿಯಲ್ಲ. ಆತನ ಆ ದಿನ ರಸ್ತೆಯ ಎಡಬದಿಯಲ್ಲಿ ಹೊಗುತ್ತಿದ್ದನು. ಈ ಅಪಘಾತವಾ ಸಮಯದಲ್ಲಿ ಮಾಹಾಲಿಂಗ ರಸ್ತೆ ದಾಟುವಾಗ ಆಗಿರುವುದು ಎಂದರೆ ಸರಿಯಲ್ಲ. ಈ ಅಪಘಾತ ಮಾಹಾಲಿಂಗ ರಸ್ತೆ ದಾಟುವ ಸಮಯದಲ್ಲಿ ಆತನ ತಪ್ಪಿನಿಂದಲೇ ಆಗಿರುವುದು ಎಂದರೆ ಸರಿಯಲ್ಲ. ಈ ಅಪಘಾತವಾಗಿರುವ ಸ್ಥಳ ಮಹಾಲಿಂಗಪುರ ಮುಧೋಳ ಮುಖ್ಯ ರಸ್ತೆ ಎಂದರೆ ಸರಿ . ಸದರಿ ರಸ್ತೆಯ ಮೇಲೆ ಸಾಕಷ್ಟು ವಾಹನಗಳ ಸಂಚಾರ ಇರುವುದು ಎಂರದೆ ಸರಿ. ಆ ಸಮಯದಲ್ಲಿ ಮಾಹಾಲಿಂಗನಿಗೆ ಯಾವುದೋ ಒಂದು ವಾಹನ ಬಡಿಸಿಕೊಂಡು ಹೋಗಿರುವುದು ಎಂದರೆ ಸರಿಯಲ್ಲ. ಈ ಅಪಘಾತ ಪಡಿಸಿರುವ ವಾಹನ ಕ್ರೂಜರ್ ವಾಹನ ಆಗಿರುವುದು. ಈ ದೂರನ್ನು ನಾನೇ ದಾಖಲು ಮಾಡಿರುವೆನು. ಅಪಘಾತವಾದ 7 ದಿವಸಗಳ ನಂತರ ದೂರನ್ನು ದಾಖಲು ಮಾಡಿರುವೆನು. ನನಗೆ ಟ್ರಾಕ್ಸ್ ವಾಹನದ ಮಾಲೀಕ ಮತ್ತು ಚಾಲಕ ಪರಿಚಯ ಇರುವವರು ಎಂದರೆ ಸರಿ. ಮಾಹಾಲಿಂಗನಿಗೆ ಯಾವುದೋ ವಾಹನ ಡಿಕ್ಕಿ ಪಡಿಸಿಕೊಂಡು ಹೋಗಿದ್ದು ಈ ಅಪಘಾತವಾದ 8 ದಿವಸಗಳ ನಂತರ ವಾಹನ ನೊಂದಣಿ ನಂ.

ಕೆಎ 22 ಎನ್ 3538 ರ ವಾಹನದ ವಿರುದ್ದ ಈ ಸುಳ್ಳು ದೂರು ದಾಖಲು ಮಾಡಿದ್ದೇವೆ ಎಂದರೆ ಸರಿಯಹುಲ್ಲ. ಆ ಸಮಯದಲ್ಲಿ ನಾನು ಸಹ ಆಸ್ಪತ್ರೆ ಯಲ್ಲಿ ಇದ್ದು ನಮ್ಮ ಮನೆಯವರು ಈ ದೂರು ದಾಖಲು ಮಾಡಲು ಲಬ್ಯ ಇಲ್ಲದೆ ಇರುವುದುರಿಂದ ಕೂಡಲೇ ದೂರು ದಾಖಲು ಮಾಡಿರುವುದಿಲ್ಲ. ಈ ಅಪಘಾತವಾದ ನಂತರ ಮಾಹಾಲಿಂಗ ನನನ್ನು ಚಿಕಿತ್ಸೆಗಾಗಿ ಮೊದಲಿಗೆ ಬಾಗಲಕೋಟೆಯ ಸರಕಾರಿ ಆಸ್ಪತ್ರೆ ಕರೆದುಕೊಂಡು ಹೋಗಿದ್ದು ಅವರು ಹೆಚ್ಚಿನ ಚಿಕಿತ್ಸೆ ಗೆ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿದ್ದು ನಂತರ ಮುಧೋಳದ ಡಾ. ನಾಯಕ್ ಇವರ ಆಸ್ಪತ್ರೆಗೆ ಕರೆದುಕೊಂಡು ಬಂದಿರುವೆವು. ಮಾಹಾಲಿಂಗನಿಗೆ ಈ ಅಪಘಾತದಲ್ಲಿ ಕಾಲು ಮುರಿದಿರುವರಿಂದ ಇದರ ಚಿಕಿತ್ಸೆಗಾಗಿ ಬಾಗಲಕೋಟೆಯ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವು. ಅಲ್ಲಿ 4 ದಿವಸಗಳ ವರೆಗೆ ಇದ್ದೇವು. ಮಾಹಾಲಿಂಗನಿಗೆ ಯಾವುದೋ ಒಂದು ವಾಹನ ಡಿಕ್ಕಿ ಪಡಿಸಿ ಎಂದರೆ ಸರಿಯಲ್ಲ. ಈ ಅಪಘಾತ 1 ನೇ ಎದುರುದಾರರ ಮಾಲೀಕತ್ವದ ವಾಹನದಿಂದ ಆಗಿದೆ ಎಂದು ಈ ಘಟನೆ ನೋಡಿರುವರು ನಮಗೆ ಹೇಳಿದ್ದರಿಂದ ಗೊತ್ತಾಗಿದೆ . ಅಪಘಾತ ಮಾಡಿದ ವ್ಯಕ್ತಿಗೆ ಎಂದಾರು ಅಲ್ಲಿ ಬಗೆಹಸಿಕೊಳ್ಳಿ ಎಂದು ಹೇಳಿದ್ದು ಆದರೆ ಆತ ತನ್ನ ವಾಹನದ ಮಿಮೆ ಇರುವುದು ಎಂದು ಹೇಳಿ ದೂರು ದಾಖಲು ಮಾಡುವಂತೆ ಹೇಳಿರುವೆನು. ಈ ಸಂಗತಿ ಈ ದೂರಿನಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ. ಪರಿಹಾರ ಪಡೆಯುವ ಸಲುವಾಗಿ ಸದರಿ ವಾಹನವನ್ನು ಈ ಪ್ರಕರಣದಲ್ಲಿ ಅಳವಡಿಸಿದ್ದೇವೆ ಎಂದರೆ ಸರಿಯಲ್ಲ. ಈ ಅಪಘಾತಗಕ್ಕೂ 1 ನೇ ಎದುರದಾರರ ಮಾಲೀಕತ್ವದ ಕೆಎ 22 ಎನ್ 3538 ರ ವಾಹನಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಬಾಗಲಕೋಟೆಯ ಸರಕಾರಿ ಆಸ್ಪತ್ರೆ ಯಲ್ಲಿ ಮಾಹಾಲಿಂಗನಿಗೆ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿರುವುದಿಲ್ಲ ಎಂದರೆ ಸರಿ. ಮುಧೋಳದ ಡಾ. ಉದಯ ನಾಯಕ್ ಇವರ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಇವರ ಆಸ್ಪತ್ರೆಯಲ್ಲಿ 8 ದಿನಗಳ ವರೆಗೆ ಒಳರೋಗಿಯಾಗಿ ಚಿಕಿತ್ಸೆ ನೀಡಿರುವೆವು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಆಸ್ಪತ್ರೆಯಲ್ಲಿ ದಾಖಲು ಮಾಡಿದ ಬಗ್ಗೆ ಯಾವುದೇ ವೈದ್ಯಕೀಯ ದಾಖಲು ಹಾಜರು ಮಾಡಿಲ್ಲ ಎಂದರೆ ಸರಿ. ಹಾಜರು ಮಾಡುತ್ತೇನೆ. ಮಾಹಾಲಿಂಗನಿಗೆ ಶಸ್ತ್ರ ಚಿಕಿತ್ಸೆ ಮಾಡಿ ರಾಡ್ ಹಾಕಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತವಾದ ಸಮಯದಲ್ಲಿ ಮಾಹಾಲಿಂಗನಿಗೆ 36 ವರ್ಷಗಳು ಆಗಿದ್ದವು ಎಂದರೆ ಸರಿಯಲ್ಲ. ಆತನಿಗೆ 26 ವರ್ಷಗಳು ಆಗಿದ್ದವು. ಈ ವಯಸ್ಸಿನ ಬಗ್ಗೆ ಆದಾರ ಕಾರ್ಡ ಹಾಜರು ಮಾಡಿಲ್ಲ ಎಂದರೆ ಸರಿ. ಮುಂದಿನ ದಿನಾಂಕ ಹಾಜರು ಮಾಡುತ್ತೇನೆ. ಈತ ಗೌಂಡಿಯವ ಕೈಯಲ್ಲಿ ಕಾರ್ಮಿಕ ಅಂತ ಕೆಲಸ ಮಾಡುತ್ತಿದ್ದನು. ಈತ ನನ್ನ ಜೊತೆಯಲ್ಲಿ ಕೆಲಸ ಮಾಡುತ್ತಿದ್ದನು. ಈತ ಗೌಂಡಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲು ಮಾಡಿಲ್ಲ ಎಂದರೆ ಸರಿ. ಮಾಹಾಲಿಂಗ

ಪ್ರತಿ ತಿಂಗಳು ರೂ. 20 ಸಾವಿರ ಹಣ ಸಂಪಾದನೆ ಮಾಡುತ್ತಿದ್ದನು ಎಂದು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ಅರ್ಜಿದಾರನಿಗೆ ಯಾವುದೇ ರೀತಿ ಕೆಲಸ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಆತನಿಗೆ ಶಾಶ್ವತ ಅಂಗ ನ್ಯೂನತೆ ಆಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿ ರುವ ಮಾಹಿತಿ ಮಾಹಾಲಿಂಗ ಮಾಹಿತಿ ಕೊಟ್ಟಿಲ್ಲ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ನನಗೆ ಹೇಗೆ ಬೇಕೂ ಹಾಗೆ ಬರೆಸಿದ್ದೇನೆ ಎಂದರೆ ಸರಿಯಲ್ಲ. ಮಹಲಿಂಗನ ಹಣ ಪಡೆಯುವ ಸಲುವಾಗಿ ನಾನು ಖೊಟ್ಟಿ ರೀತಿಯ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಬರೆಸಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತಕ್ಕೆ ಮತ್ತು ಕ್ರೂಜರ ವಾಹನಕ್ಕೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಈ ಅರ್ಜಿಯಲ್ಲಿ ಕೋರಿರುವಂತೆ ಪರಿಹಾರ ನೀಡಲು 2 ನೇ ಅರ್ಜಿದಾರರು ಬಾದ್ಯಸ್ಥರು ಅಲ್ಲ ಎಂದರೆ ಸರಿಯಲ್ಲ.

ನಾನು ಹಾಜರು ಪಡಿಸಿರುವ ಬಿಲ್ ಗಳು ಔಷಧಿ ಅಂಗಡಿಗೆ ಮಾತ್ರ ಸಂಬಂದಪಟ್ಟಿವೆ ಎಂದರೆ ಸರಿಯಲ್ಲ. ವೈದ್ಯರು ನೀಡಿರುವ ಸಲಹಾ ಚೀಟಿಗಳನ್ನು ನಾನು ಹಾಜರು ಪಡಿಸಿಲ್ಲ ಎಂದರೆ ಸರಿ. ನಾನು ಹಾಜರು ಪಡಿಸಿರುವ ವೈದ್ಯಕೀಯ ಬಿಲ್ ಗಳು ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿ ಮಾಡಿಕೊಂಡು ಹಾಜರು ಪಡಿಸಿದ್ದೇವೆ ಎಂದರೆ ಸರಿಯಲ್ಲ. ಈ ಔಷಧಿಯ ಅಂಗಡಿಯ ಬಲ್ ಗಳು ಕ್ರಮ ಸಂಖ್ಯೆ ಕ್ರಮವಾಗಿ ಇರುವೆವು ಎಂದರೆ ಸರಿಯಲ್ಲ. ಬಾಗಲಕೋಟೆ ಆಸ್ಪತ್ರೆ ಯಲ್ಲಿನ ವೈದ್ಯಕೀಯ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ನಿಪಿ 12 ರ ದಾಖಲೆಯಲ್ಲಿ ಅರ್ಜಿದಾರನಿಗೆ ಈ ರಸ್ತೆಯ ಅಪಘಾತದಿಂದ ಆದ ಗಾಯಗಳು ಅಂತ ವೈದ್ಯರು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಈ ಪ್ರಕರಣಕ್ಕೆ ಅನುಕೂಲವಾಗುವ ಸಲುವಾಗಿ ಸೃಷ್ಟಿ ಮಾಡಿಕೊಂಡು ಬಂದು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವ ಸಲುವಾಗಿ ನಾನು ಖೊಟ್ಟಿ ರೀತಿ ದಾಖಲು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರ ಮೂಕ ನಾಗಿದ್ದರಿಂದ ಕಿವುಡ ಮತ್ತು ಮೂಕರ ತರಬೇತಿಯ ಮುಖಾಂತರ ಆತ ಸಾಕ್ಷಿ ನೀಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ಈ ಶಾಲೆಗೆ ಹೋಗಿ ಅರ್ಜಿದಾರದ ಪರವಾಗಿ ಸಾಕ್ಷಿ ನುಡಿಯಬೇಕಾಗುತ್ತದೆ ಎಂದು ನಾನು ಕೇಳಿರುವುದಿಲ್ಲ . ಈ ಪ್ರಕರಣಕ್ಕೆ ಅನುಕೂಲವಾಗುವ ಹಾಗೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಯಾಳು ಮಹಾಲಿಂಗ ಆತ ತನ್ನ ಸಂಜ್ಞೆ ಪ್ರಕಾರ ಹೇಳುವ ಎಲ್ಲಾ ಸಂಗತಿಗಳು ನನಗೆ ಗೊತ್ತಾಗುವವರು ಅದರ ಆದಾರ ಮೇರೆಗೆ ಈ ಸಾಕ್ಷಿ ನಾನು ನುಡಿಯುತ್ತಿರುವೆನು. ಈ ಆತನನ್ನು ನಾನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುವುದಿಲ್ಲ ಎಂದರೆ ಸರಿ.

1 ನೇ ಎದುರುದಾರರ ಮತ್ತು ಅವರ ವಕೀಲರನ್ನು ಕೂಗಿಸಲಾಯಿತು, ಅವರು

ನ್ಯಾಯಾಲಯದಲ್ಲಿ ಹಾಜರು ಇಲ್ಲದ ಕಾರಣ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ.,/ಎಂ ಎ ಸಿ ಟಿ., ಮುಧೋಳ